ಮುಂಡರಗಿ ತಾಲ್ಲೂಕು ಮುರತಿ ಕೆರೆಗೆ ಅಡಿಗಲ್ಲು

1439 (1886) - ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ (ಮುಂಡರಗಿ): ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ್ ಜಿಲ್ಲೆ ಮುಂಡರಗಿ ತಾಲ್ಲೂಕು ಮುರಡಿ ಕೆರೆಗೆ ಅಡಿಗಲ್ಲು ಹಾಕಿ ಎಷ್ಟು ವರ್ಷಗಳಾದವು;

ಆ) ಕಾಮಗಾರಿ ಎಂದಿನಿಂದ ಪ್ರಾರಂಭವಾಗುತ್ತದೆ.

ಇ) ಶಿಂಗಟರಾಯನಕೇರಿ ಕೆರೆಗೆ ಅಡಿಗಲ್ಲು ಹಾಕಿ ಎಷ್ಟು ವರ್ಷಗಳಾದವು

ಈ) ಕಾಮಗಾರಿ ಎಂದಿನಿಂದ ಪ್ರಾರಂಭವಾಗುತ್ತದೆ?

ಶ್ರೀ ಕುಮಾರ್ ಬಂಗಾರಪ್ಪ ಎಸ್. (ಜಲ ಸಂಪನ್ಮೂಲ ರಾಜ್ಯ ಸಚಿವರು) :

ಅ) ಮುರಡಿ ಕೆರೆಗೆ ಅಡಿಗಲ್ಲು ಹಾಕಿ 2 ವರ್ಷ 8 ತಿಂಗಳು ಆಗಿರುತ್ತದೆ.

ಆ) ಕಾಮಗಾರಿಗೆ ಸರ್ಕಾರದಿಂದ ದಿ:10-01-2002 ರಂದು ಆಡಳಿತಾತ್ಮಕ ಅನುಮೋದನೆ ಆಗಿರುತ್ತದೆ. ಮಾರ್ಚ್ 2002ರಂದು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಈ ಕಾಮಗಾರಿಗೆ ದಿ: 18-01-02ರಲ್ಲಿ ಟೆಂಡರ್ ಪ್ರಕಟಣೆ ಆಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ತಕ್ಷಣ ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಶಿಂಗಟರಾಯನಕೆರೆಗೆ ಅಡಿಗಲ್ಲು ಹಾಕಿ 2 ವರ್ಷ 8 ತಿಂಗಳು ಆಗಿರುತ್ತದೆ.

ಈ) ಶಿಂಗಟರಾಯನಕೆರೆಯ ಅಂಗಳದ ಭೂಸ್ವಾಧೀನದ ಬಗ್ಗೆ ಜಿಲ್ಲಾಧಿಕಾರಿಗಳು, ಗದಗ್ ಇವರು ದಿ:29-08-01 ರಂದು 4(1) ಅಧಿಸೂಚನೆ ಹೊರಡಿಸಿರುತ್ತದೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು 6(1) ಅಧಿಸೂಚನೆಯ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು.

ಬೆಳೆವಿಮೆ ಯೋಜನೆ ಕುರಿತು

1440 (1887) - ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ (ಮುಂಡರಗಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳೆ ವಿಮೆ ಮಾಡಿದರೆ ರೈತರಿಗೆ ವಿಮಾ ಸೌಲಭ್ಯ ಸಿಗಬೇಕಾದರೆ ಅನುಸರಿಸುವ ಮಾನದಂಡಗಳೇನು?

ಆ) ಹಿಂದಿನ ಬೆಳೆ ಉತ್ಪಾದನೆ (ಥ್ರಶ್ ಓಲ್ಡ್ ಯೀಲ್ಡ್) ಎಷ್ಟು ವರ್ಷದ ಸರಾಸರಿ ಮಾಡಲಾಗುತ್ತದೆ?

ಇ) ಎಲ್ಲಾ ಬೆಳೆಗಳ ಥ್ರಶ್ ಓಲ್ಡ್ ಯೀಲ್ಡ್ ಸರಾಸರಿ ಎಷ್ಟು? (ತಾಲ್ಲೂಕು ಹಾಗೂ ಹೋಬಳಿ ವಾರು ವಿವರ ನೀಡುವುದು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ಅಧಿಸೂಚಿತ ಬೆಳೆಗಳನ್ನು ಬೆಳೆಯುವ ಮತ್ತು ಹಣಕಾಸು ಸಂಸ್ಥೆಗಳಿಂದ ಬೆಳೆ ಸಾಲ ಪಡೆಯುವ ಎಲ್ಲಾ ರೈತರು ಕಡ್ಡಾಯವಾಗಿ ಬೆಳೆ ವಿಮಾ ಯೋಜನೆಗೆ ಒಳಗೊಳ್ಳುವರು. ಅಧಿಸೂಚಿತ ಬೆಳೆಗಳನ್ನು ಬೆಳೆಯುವ ಇತರೆ ರೈತರು ಸ್ವಇಚ್ಛೆಯಿಂದ ನಿಗಧಿ ವಿಮಾ ಕಂತನ್ನು ಪಾವತಿಸುವ ಮೂಲಕ ಬೆಳೆ ವಿಮಾ ಯೋಜನೆಗೆ ಒಳಗೊಳ್ಳಬಹುದು.

ಆ) ಒಂದು ವಿಮಾ ಘಟಕದಲ್ಲಿನ ಬೆಳೆಯ ಪ್ರಾರಂಭಿತ ಇಳುವರಿಯ (ಥ್ರಶ್ ಓಲ್ಡ್ ಯೀಲ್ಡ್) ಭತ್ತ ಮತ್ತು ಗೋಧಿ ಸಂಬಂಧದಲ್ಲಿ ನಷ್ಟ ಭರ್ತಿಯ ಮಟ್ಟ (ಇಂಡೆಮ್ನಿಟ್ ಲಿವಲ್)ದಿಂದ ಗುಣಿಸಲಾದ ಹಿಂದಿನ ಮೂರು ವರ್ಷಗಳ ಸರಾಸರಿ ಇಳುವರಿಯನ್ನು ಮತ್ತು ಇತರೆ ಬೆಳೆಗಳ ಸಂಬಂಧದಲ್ಲಿ ನಷ್ಟ ಭರ್ತಿಯ ಮಟ್ಟದಿಂದ ಗುಣಿಸಲಾದ ಐದು ವರ್ಷಗಳ ಸರಾಸರಿ ಇಳುವರಿಯನ್ನು ಆಧರಿಸಿ ಕಂಡು ಹಿಡಿಯಲಾಗುವುದು.

ಇ) 2000-01ನೇ ಸಾಲಿನ ಪ್ರಾರಂಭಿಕ ಇಳುವರಿಯ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿದೆ. 2001-02ನೇ ಸಾಲಿನ ಪ್ರಾರಂಭಿಕ ಇಳುವರಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ತಯಾರಿಸುತ್ತಿದ್ದು, ಮುಂಗಾರು ಕಟಾವು ಆಗುತ್ತಿರುವುದರಿಂದ ಹಾಗೂ ಹಿಂಗಾರು ಬೆಳೆಗಳು ಇನ್ನೂ ಹೊಲಗಳಲ್ಲೇ ಇರುವುದರಿಂದ ಇದನ್ನು ನೀಡಲು ಸಮಯಾವಕಾಶ ಬೇಕಾಗುತ್ತದೆ.

ಯು.ಕೆ.ಪಿ. ಯೋಜನೆಗೆ ಬಾಂಡ್ ಮೂಲಕ ಹಣ ಸಂಗ್ರಹ

1444 (1923) - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯು.ಕೆ.ಪಿ. ಯೋಜನೆಗಳ ಅನುಷ್ಠಾನಕ್ಕಾಗಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಮತಿಯಿಂದ ಬಾಂಡ್ ಮುಖಾಂತರ ಹಣ ಸಂಗ್ರಹಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಎಷ್ಟು ಕೋಟಿ ರೂಪಾಯಿ ಸಂಗ್ರಹಿಸಲು ಮುಂದಾಗಿದೆ;

ಇ) ಸಾರ್ವಜನಿಕರಿಂದ ಸಂಪನ್ಮೂಲ ಕ್ರೋಢೀಕರಿಸಲು ಸರ್ಕಾರ ಅನುಮತಿಸಿದೆಯೇ? ಹಾಗಿದ್ದಲ್ಲಿ ಯಾವಾಗಿನಿಂದ ಸಂಗ್ರಹ ಪ್ರಾರಂಭಿಸಲಾಗುವುದು;

ಈ) ಈ ಮೊತ್ತವನ್ನು ಯಾವ ಉದ್ದೇಶಗಳಿಗಾಗಿ ಬಳಸಲಾಗುವುದು;

ಉ) ಸದರಿ ಬಾಂಡುಗಳ ಮುಖ ಬೆಲೆ ಎಷ್ಟು; ಎಷ್ಟು ಶ್ರೇಣಿಯಲ್ಲಿ ತರಲಾಗುವುದು. ಅವಧಿ ಎಷ್ಟಕ್ಕೆ ನಿಗಧಿಪಡಿಸಲಾಗಿದೆ? (ವಿವರ ನೀಡುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) - ಹೌದು -

ಆ) ನಿಗಮವು ಮಾರುಕಟ್ಟೆಯಿಂದ ರೂ. 6710.42 ಕೋಟಿಗಳನ್ನು ಸಂಗ್ರಹಿಸಲು ಮುಂದಾಗಿದೆ.